**KARNATAK UNIVERSITY, DHARWAD**

EXAMINATION SECTION, K.U.DHARWAD

Registrar (Evaluation) 0836-2215375

Ref: No.KU/Exam/RVCell/2024/04 Date: 09-03-2026

## ಸುತ್ತೋಲೆ

ವಿಷಯ:- UUCMS ಅಡಿಯಲ್ಲಿ ಪ್ರಕಟಿಸಲಾದ Dec-2025/Jan -2026 ಸ್ನಾತಕ (ಯು.ಜಿ.) 1, 3 (R-NEP) ಹಾಗೂ 5 ನೇ ಸೆಮಿಸ್ಟರ್‌ನ (NEP) ಪರೀಕ್ಷಾ ಫಲಿತಾಂಶದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಅರ್ಜಿಸಲ್ಲಿಸುವ ಕುರಿತು.

ಮೇಲಿನ ಉಲ್ಲೇಖಿದಂತೆ UUCMS ಅಡಿಯಲ್ಲಿ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಟ್ಟ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯದ ಪ್ರಾಚಾರ್ಯರ ಗಮನಕ್ಕೆ ತರಬಯಸುವುದೇನೆಂದರೆ Dec-2025/ January- 2026 ರ ಎಲ್ಲ ಸ್ನಾತಕ (ಯು.ಜಿ.) 1, 3 (R-NEP) ಹಾಗೂ 5ನೇ ಸೆಮಿಸ್ಟರ್‌ನ (NEP) ಪರೀಕ್ಷಾ ಫಲಿತಾಂಶ ವನ್ನು ಈಗಾಗಲೇ UUCMS ನಲ್ಲಿ ಪ್ರಕಟಿಸಲಾಗಿರುತ್ತದೆ. ಅಂತಹ ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳಲು, ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸಂಬಂಧಪಟ್ಟ ವಿದ್ಯಾರ್ಥಿಗಳು ತಮ್ಮ ಮಹಾವಿದ್ಯಾಲಯ/ ವಿಭಾಗದ ಮುಖಾಂತರ ದಿನಾಂಕ: 11-03-2026 ರಿಂದ 14-03-2026 ರ ವರೆಗೆ ಅಂಕಗಳ ಮರು ಎಣಿಕೆ/ಛಾಯಾ ಪ್ರತಿಗಳಿಗಾಗಿ ಹಾಗೂ 20-03-2026 ರಿಂದ 30-03-2026 ರ ವರೆಗೆ ಮರು ಮೌಲ್ಯಮಾಪನಕ್ಕಾಗಿ ಈ ದಿನಾಂಕಗಳ ಅವಧಿಯಲ್ಲಿ ವಿದ್ಯಾರ್ಥಿಗಳು ತಮ್ಮ **UUCMS Portal** ನ ಮುಖಾಂತರ ಅರ್ಜಿಗಳನ್ನು ಹಾಗೂ ಶುಲ್ಕವನ್ನು ಭರಿಸಲು ತಿಳಿಸಲಾಗಿದೆ. ಶುಲ್ಕದ ವಿವರ ಈ ಕೆಳಗಿನಂತಿದೆ.

| | |
|---|---|
| i. ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕೆ ಪ್ರತಿ ಉತ್ತರ ಪತ್ರಿಕೆಗೆ | ರೂ. 650=00 |
| ii. ಅಂಕಗಳ ಮರು ಎಣಿಕೆಗಾಗಿ ಪ್ರತಿ ಉತ್ತರ ಪತ್ರಿಕೆಗೆ | ರೂ. 255=00 |
| iii. ಉತ್ತರ ಪತ್ರಿಕೆಯ ಛಾಯಾ ಪ್ರತಿಯ ಪ್ರತಿ ಉತ್ತರ ಪತ್ರಿಕೆಗೆ | ರೂ. 113=00 |

ಇನ್ನಿತರ ವಿವರಗಳು:

೧. ಸದರ ಸೆಮಿಸ್ಟರ್‌ಗಳಲ್ಲಿ ಮರು ಮೌಲ್ಯಮಾಪನಕ್ಕಾಗಿ ಸಲ್ಲಿಸುವ ಅರ್ಜಿಗಳ ಜೊತೆಗೆ ಶುಲ್ಕ ಭರಿಸಿ ಹಾಗೂ ಅಂತರ್‌ಜಾಲದಲ್ಲಿ ದೊರೆಯುವ ವಿದ್ಯಾರ್ಥಿಗಳ ಫಲಿತಾಂಶದ ಅಂಕಗಳ ಪಟ್ಟಿಯೊಂದಿಗೆ ಸಲ್ಲಿಸುವುದು. ( ಮೂಲ ಅಂಕಪಟ್ಟಿಯ ಅವಶ್ಯವಿರುವುದಿಲ್ಲ).

೨. ಗರಿಷ್ಠ 2 ವಿಷಯಗಳಿಗೆ (ಉತ್ತರ ಪತ್ರಿಕೆಗಳಿಗೆ) ಮರು ಮೌಲ್ಯಮಾಪನ ಅರ್ಜಿ ಸಲ್ಲಿಸಬಹುದು. ಆದರೆ ಪ್ರಾಯೋಗಿಕ ಪರೀಕ್ಷೆ, ಪ್ರೌಢಪ್ರಬಂಧ (Dissertation), ಓ.ಎಂ.ಆರ್ ಮೂಲದ ಉತ್ತರ ಪತ್ರಿಕೆ, ಆಂತರಿಕ ವಿಷಯಗಳ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

೩. ಅವಧಿ ಮುಗಿದ ಹಾಗೂ ಮ್ಯಾನುವಲ್ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಸದರ ಮಾಹಿತಿಯನ್ನು ತಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರಲು ಸೂಚಿಸಲಾಗಿದೆ.

ವಿ.ಸೂ: ಕೊನೆಯ ದಿನಾಂಕ ಮುಗಿದ ಎರಡು ದಿನಗಳೊಳಗಾಗಿ ಎಲ್ಲ ವಿದ್ಯಾರ್ಥಿಗಳಿಂದ ವಿವರವಾದ ಮಾಹಿತಿಯನ್ನು ಪಡೆದು ಕ್ರೋಢಿಕರಿಸಿ ಅಧೀಕ್ಷಕರು, ಮರು ಮೌಲ್ಯಮಾಪನ ವಿಭಾಗ, ಕೊಠಡಿ ಸಂಖ್ಯೆ: ೨೦೩ ಪರೀಕ್ಷಾ ವಿಭಾಗ ಕ.ವಿ.ವಿ. ಧಾರವಾಡ ಇವರಿಗೆ ನೀಡುವುದು.

ಕುಲಸಚಿವರು (ಮೌಲ್ಯಮಾಪನ)

ಗೆ,

೧. ಸಂಬಂಧಪಟ್ಟ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು/ವಿಭಾಗದ ಮುಖ್ಯಸ್ಥರು/ಕೋ-ಆರ್ಡಿನೇಟರುಗಳು

೨. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಚೇರಿ/ಕುಲಸಚಿವರ ಕಚೇರಿ/ವಿತ್ತಾಧಿಕಾರಿಗಳ ಕಚೇರಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩. ಉಪಕುಲಸಚಿವರು, ಸಹಾಯಕ ಕುಲಸಚಿವರು ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕ.ವಿ.ವಿ.ಧಾರವಾಡ. ಇವರಿಗೆ ಅಂತರ್‌ಜಾಲದ ಮುಖಪುಟದಲ್ಲಿ ಪ್ರಕಟಣೆಗಾಗಿ.

೭. ಅಧೀಕ್ಷಕರು, ಸಾಮಾನ್ಯ ಆಡಳಿತ (ಪರೀಕ್ಷಾ) ವಿಭಾಗ, ಕ.ವಿ.ವಿ.ಧಾರವಾಡ ಇವರ ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಚಾರ್ಯರುಗಳಿಗೆ ಇ-ಮೇಲ್ ಮುಖಾಂತರ ಕಳುಹಿಸುವ ಕ್ರಮಕ್ಕಾಗಿ.

೮. ಸಿಸ್ಟಮ್ ಎನಾಲಿಸ್ಟ್ ಗಣಕಯಂತ್ರ ವಿಭಾಗ, ಕ.ವಿ.ವಿ.ಧಾರವಾಡ ಇವರ ಮಾಹಿತಿಗಾಗಿ ಹಾಗೂ ಸುತ್ತೋಲೆಯನ್ನು UUCMS Portal ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.